ಸಮಗ್ರವಾಗಿ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಮೀಟಿಂಗ್ ಕರೆದು ಚರ್ಚಿಸಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಾನೂ ಸಹ ಮಾಡಿದ್ದೆ. ಇದರ ಬಗ್ಗೆ ಸಾಕಷ್ಟು ಸಲ ಪ್ರಸ್ತಾಪ ಮಾಡಿದ್ದೆ. ತಾವು ಎಲ್ಲೂ ಉತ್ತರ ಕೊಟ್ಟಿದ್ದೀರಿ. ಸುಮಾರು 15 ಸಾವಿರ ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ. ನಾವು ಏನಂತಿ ಮಾಡುವಂತದ್ದು ಅವರ ಮನಸ್ಸಿನಲ್ಲಿ ಅಧಿಕಾರಿಗಳು ಕೊಟ್ಟಿರುವಂಥ ಲೆಕ್ಕದ ಪ್ರಕಾರ ಸನ್ಮಾನ್ಯ ಸಚಿವರಿಗೆ ಭಯವಾಗಿದೆ. ಸುಮಾರು ಮೂವತ್ತು ಕೋಟಿ ರೂಪಾಯಿಗಳು ಖರ್ಚು ಬರುತ್ತದೆ ಎಂಬ ಭಯದಲ್ಲಿ ಇದ್ದಾರೆ. ನೀವು ದಯಮಾಡಿ ನಮ್ಮೆಲ್ಲರನ್ನು ಕರೆಯಿರಿ. ಸನ್ಮಾನ್ಯ ಹಿರಿಯರಾದಂಥ ಎಸ್. ರಾಜಶೇಖರಮೂರ್ತಿಯವರಿಗೂ ಅದರ ತೊಂದರೆ ಗೊತ್ತಿದೆ. ಇದರ ಬಗ್ಗೆ ಎಲ್ಲಾ ಮಂತ್ರಿಗಳಿಗೂ ಗೊತ್ತಿದೆ. ಆ ಜಿಲ್ಲೆಯ ಮಕ್ಕಳು, ಶಿಕ್ಷಕರು ಬಂದಿದ್ದಾರೆ. ತಾಂತ್ರಿಕ ಶಿಕ್ಷಣವನ್ನು ಉಳಿಸಬೇಕಾಗಿದೆ. ದೇಶಪಾಂಡೆಯವರು ಹೇಳಿದಂತೆ ಡಿಗ್ರಿ ತೆಗೆದುಕೊಂಡು ಏನು ಮಾಡುವುದು ? ಐ.ಟಿ.ಐ. ಅದ ಮೇಲೆ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುತ್ತಾರೆ ಇದರಲ್ಲಿ ಸರ್ಕಾರದ ಕರ್ತವ್ಯವಿದೆ. ನಾಳೆ ಖಾಸಗಿಯವರು ಮಾಡುವುದಿಲ್ಲವೆಂದು ನಿಲ್ಲಿಸಿ ಬಿಟ್ಟರೆ ಸರ್ಕಾರವೇ ಪೂರ್ತಿ ಜವಾಬ್ದಾರಿಯನ್ನು ಹೊತ್ತುಕೊಂಡು ಐ.ಟಿ.ಐ. ನಡೆಸಬೇಕಾಗುತ್ತದೆ. ಅಂಥ ಪರಿಸ್ಥಿತಿ ಇರುವುದರಿಂದ ದಯಮಾಡಿ ಇದು 7–8 ಕೋಟಿ ರೂಪಾಯಿಗಳ ಮೇಲೆ ಬರುವುದಿಲ್ಲ. ಇಲ್ಲಿ ನಾವೇನೂ ಉತ್ತರ ಬಯಸುವುದಿಲ್ಲ. ನಾಳೆಯೇ ಇದಕ್ಕೆ ಸಂಬಂಧಪಟ್ಟ ಸಭೆಯನ್ನು ಕರೆಯಿರಿ. ನಿಮ್ಮನ್ನು ಕನ್ವಿನ್ಸ್ ಮಾಡುತ್ತೇವೆ. If it is less than ಆಗ. ನೀವು ಒಪ್ಪಿಕೊಳ್ಳಿ. ನಂತರ ಅನುದಾನ ಕೊಡುವುದಕ್ಕೆ ಪ್ರಾರಂಭ ಮಾಡಿ. ಅಷ್ಟೇ ನಾವು ನಿಮ್ಮಲ್ಲಿ ವಿನಂತಿ ಮಾಡುವುದು.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಶ್ರೀ ದೇಶಪಾಂಡೆಯವರು ಹೇಳಿದ ಹಾಗೆ ಸರಾಸರಿ ಎರಡು ಲಕ್ಷ ರೂಪಾಯಿಗಳು ಎಂದು ಲೆಕ್ಕ ಹಾಕಿದ್ದಾರೆ. ಒಂದೊಂದು ಸರ್ಕಾರಿ ಐ.ಟಿ.ಐ.ಯಲ್ಲಿ ಏಳು ಡಿಪಾರ್ಟ್‌ಮೆಂಟ್ಸ್ ಇದೆ. ಮತ್ತು ಏಳು ಟ್ರೇಡ್ಸ್ ಇವೆ. ಏಳು ಟ್ರೇಡ್ಸ್ ಅಂದರೆ 14 ಲಕ್ಷ ಆಗುತ್ತದೆ. 151 ಐ.ಟಿ.ಐ.ಗೆ 14 ಲಕ್ಷದ ಪ್ರಕಾರ 21 ಕೋಟಿ ರೂಪಾಯಿಗಳು ಆಗುತ್ತದೆ. ಯಾವ ರೀತಿ ಮಾಡಬೇಕೆಂಬುದಕ್ಕೆ ಶ್ರೀ ದೇಶಪಾಂಡೆಯವರು ಮತ್ತು ಶ್ರೀ ಯಡಿಯೂರಪ್ಪನವರು ಹೇಳಿದ ಹಾಗೆ ಒಂದು ಮೀಟಿಂಗ್ ಕರೆಯಿಸಿ ಈ ಸಮಸ್ಯೆಗೆ ಪರಿಹಾರ ಇದೆ. ಇದನ್ನು ಅವರೊಡನೆ ಮತ್ತು ಸರ್ಕಾರದೊಡನೆ ಚರ್ಚೆ ಮಾಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಹಣ ಬಿಡುಗಡೆಯಾಗದೆ ಕೆಲಸ ಕಾರ್ಯಗಳು ಸ್ಥಗಿತ.

† ಶ್ರೀ ಶಿವಶೇಖರಪ್ಪಗೌಡ ಶಿರವಾಳ (ಶಹಪುರ):– ಮಾನ್ಯ ಅಧ್ಯಕ್ಷರೆ ''ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರವು 65 ಕೋಟಿ ರೂಪಾಯಿಗಳನ್ನು ನಿಗದಿಗೊಳಿಸಿದ್ದರೂ ಸಹ ಹಣ ಬಿಡುಗಡೆಯಾಗದೆ ಕೆಲಸ ಕಾರ್ಯಗಳು ಸ್ಥಗಿತಗೊಂಡಿರುವ ಬಗ್ಗೆ'' ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಶ್ರೀರಂಗದೇವರಾಯಲು (ಮಾನ್ಯ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೇ, ಹೋದ ಫೆಬ್ರುವರಿಗೆ ಕರ್ನಾಟಕ ಸರ್ಕಾರ ಎಚ್.ಕೆ.ಡಿ.ಬಿ.ಗೆ 35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿತ್ತು ಈ ಫೆಬ್ರುವರಿಯಲ್ಲಿ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಈ

ಮಾರ್ಚಿಗೆ 5 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಈ ವರ್ಷ ಎಚ್.ಕೆ.ಡಿ.ಬಿ.ಗೆ 50 ರೂಪಾಯಿಗಳನ್ನು ಖರ್ಚು ಮಾಡಿದೆ. ಅಲ್ಲಿ ಎಷ್ಟೆಷ್ಟು ಖರ್ಚಾಗಿದೆ, ಎಂಬ ಮಾಹಿತಿ ಬಂದಿಲ್ಲ ಇನ್ನು 15 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಅಲ್ಲಿಂದ ಮಾಹಿತಿ ಬಂದ ತಕ್ಷಣ 15 ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ:– ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಹಣ ಬ ಮಾಡುತ್ತೇವೆ ಎಂದು ಹೇಳಿದ್ದಾರೆ. ಈಗ ನನ್ನ ಕ್ಷೇತ್ರದಲ್ಲಿರತಕ್ಕಂಥ ಕೆಲಸ ನೀರು ಸರ ದುರಸ್ತಿಗೆ 3 ಕೋಟಿ ರೂಪಾಯಿಗಳ ಕೆಲಸ ಇದೆ. ಅದು ಒಂದು ವಾರದಿಂದ ಕೆಲಸ ನಿಂತು ಹೆ ಮತ್ತು 50 ಹಾಸಿಗೆ ಇರುವಂಥ ಆಸ್ಪತ್ರೆಯ ಕೆಲಸ ಕೂಡ ಸ್ಥಗಿತಗೊಂಡಿದೆ. ಇದರ ಬಗ್ಗೆ ಕೇಳುತ್ತೇನೆ. 50 ಕೋಟಿ ರೂಪಾಯಿಗಳು ಪೆಂಡಿಂಗ್ ಬಿಲ್ಲುಗಳಿಗೆ ಹೋಯಿತು. ಮಾಡುವಂತಹ ವ್ಯವಸ್ಥೆಗೆ 15 ಕೋಟಿ ರೂಪಾಯಿಗಳನ್ನು ಮಾರ್ಚಿ ಕೊನೆಯಲ್ಲಿ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ಇದೇ ರೀತಿ ನನ್ನ ಒಬ್ಬನ ಕ್ಷೇತ್ರದ ಕೆಲಸವಲ್ಲ ಎಲ್ಲಾ ಕೆಲಸ ನಿಂತು ಹೋಗಿದೆ. ದಯಮಾಡಿ ಹೇಳುತ್ತೇನೆ 15 ಕೋಟಿ ರೂಪಾಯಿಗಳನ್ನು ತಕ್ಷಣ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಶಂಕರ್ ರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯ ಮಂತ್ರಿಗಳ ಗಮನಕ್ಕೆ ಈ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈಗಾಗಲೇ ಪ್ರಾರಂಭ ಮಾಡಿರತಕ್ಕಂತಹ ಕೆಲಸಗಳಿಗೆ ಸ 250 ಕೋಟಿ ರೂಪಾಯಿಗಳು ಬೇಕು ಎಂದು ಮೊನ್ನೆ ಅಭಿವೃದ್ಧಿ ಮಂಡಲಿ ಸಭೆಯಲ್ಲಿ ಹೆ ಸಂಪನ್ಮೂಲವನ್ನು ಹೇಗೆ ಕ್ರೋಢೀಕರಣ ಮಾಡಬೇಕು ಎಂದು ಮಂತ್ರಿಗಳು ನಮ್ಮನ್ನು ಕೆ ಇದಕ್ಕೆ ನಮಗೆ ಏನು ಉತ್ತರ ಹೇಳಬೇಕು ಎಂದು ಅರ್ಥವಾಗುತ್ತಾ ಇಲ್ಲ. ನಮ್ಮವರೇ ಮ ಇದ್ದಾರೆ, ಅವರು ಯೋಚನೆ ಮಾಡಬೇಕು. ನಾವು ಯಾವ ರೀತಿ ಹಣ ಒದಗಿಸಬೇಕು ಎಂ ನೀವು ಸಲಹೆ ಮಾಡಿ ಎಂದು ನಮ್ಮನ್ನು ಕೇಳಿದಾಗ ನಮಗೆ ಏನು ಉತ್ತರ ಕೊಡುವುದಕ್ಕೆ ಆದರೆ ಮುಖ್ಯವಾಗಿ ಕೆಲವೊಂದು ಬದಲಾವಣೆಗಾಗಿ ತಮ್ಮಲ್ಲಿ ಅನೇಕ ಪತ್ರಗಳು ಬಂದಿವೆ. ಆ ಮತ್ತು ಜೋಳದ ರಾಶಿ ರೂಟ್ ಬೇಕಾಗಿಲ್ಲ. ಅದು ನಮ್ಮ ನ್ಯಾಷನಲ್ ಹೈವೇನಲ್ಲಿ ಸೇರಿದೆ. ಮಾಡಿರತಕ್ಕಂತಹ ಸುಮಾರು 19 ಲಕ್ಷ ರೂ.ಗಳನ್ನು ಬೇರೆ ರೂಟ್‌ಗಳಿಗೆ ಮಾಡಬೇಕು ಹಿಂದಿನ ಮಂತ್ರಿಮಂಡಲ ತೀರ್ಮಾನ ಮಾಡಿದ್ದು, ಅದನ್ನು ಬೇರೆ ಬೇರೆ ಕೆಲಸಗಳಿಗೆ ಕೊ ಎಂದು ನಾವೆಲ್ಲಾ ಕೇಳಿದ್ದೇವೆ. ಅದರ ಬಗ್ಗೆ ಇನ್ನೂ ಏನೂ ಉತ್ತರ ನಮಗೆ ಬಂದಿಲ್ಲ. ಈ 15 ರೂಪಾಯಿಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇವೆ.

ಡಾ।। ಎ. ಬಿ. ಮಲಕ ರೆಡ್ಡಿ:– ಮಾನ್ಯ ಅಧ್ಯಕ್ಷರೇ, ಈ ಹೈದರಾಬಾದ್ ಕರ್ನಾಟಕ ಅ ಮಂಡಲಿಯ ಆಶ್ರಯದಲ್ಲಿ ನಡೆಯತಕ್ಕಂತಹ ಕಾರ್ಯಕ್ರಮಗಳು ಏನು ಇವೆ ಇವು ಸ ಮತ್ತು ಅವಧಿಗೆ ಸೀಮಿತವಾದ ಕಾರ್ಯಕ್ರಮ. ನಿರಂತರವಾಗಿ ನಡೆಯತಕ್ಕಂತಹ ಕಾರ್ಯಕ್ರ ಸರ್ಕಾರ ವಿಶೇಷ ಆಸ್ಥೆ ವಹಿಸಿ, ವಿಶೇಷವಾದಂತಹ ಒಂದು ಕಾರ್ಯಕ್ರಮವನ್ನು ನಿರೂಪಿ ಅದು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯ ಆಶ್ರಯದಲ್ಲಿ ನಡೆಯಬೇಕಾಗಿದೆ ಈಗ ಏನು ಆಗುತ್ತಿದೆಯೆಂದರೆ ಮಾನ್ಯ ಶಂಕರರೆಡ್ಡಿಯವರು ಹೇಳಿದಂತೆ 250 ಕೋಟಿ ರೂ ಖರ್ಚು ಮಾಡುವುದು ವರ್ಷ ವರ್ಷಕ್ಕೆ ಅಲ್ಲ. ಸರ್ಕಾರದವರು 7–8 ವರ್ಷದ ಯೋಜನೆಯನ್ನು ರೂಪಿಸಿದ್ದಾರೆ. ಈ 7–8 ವರ್ಷದಲ್ಲಿ ಸುಮಾರು 600 ಕೋಟಿ ರೂಪಾಯಿ ಖರ್ಚು ಮಾಡಬೇಕು ಎಂದು ಸರ್ಕಾರ ಮನಸ್ಸು ಮಾಡಿದೆ. ಅದು ವರ್ಷ ವರ್ಷ 50

ರೂಪಾಯಿ ಕೊಡಬೇಕು ಎಂದು ನಿರ್ಧಾರವಾಗಿತ್ತು. ಆದರೆ ಏಸ್ಕಲೇಷನ್ ಆಫ್ ಕಾಸ್ಟ್ ಹೆಚ್ಚಿ ಆಗುವುದರಿಂದ ಈ ವರ್ಷ 65 ಕೋಟಿ ರೂಪಾಯಿ ಕೊಡಬೇಕು ಎಂದು ಸರ್ಕಾರ ನಿಗದಿ ಮಾಡಿದೆ. ಆದರೆ ಆಗತಕ್ಕಂತಹ ವಿಷಯ ಏನೆಂದರೆ ಸರ್ಕಾರದವರು ಏನು ಕಾರ್ಯಕ್ರಮ ರೂಪಿಸಿದ್ದಾರೆ, ಅದರ ಪ್ರಕಾರ ಕಂಟ್ರಾಕ್ಟ್ ಕೊಟ್ಟಿದ್ದಾರೆ, ಟೆಂಡರ್ ಆಗಿದೆ, ಕಂಟ್ರಾಕ್ಟ್ ಅಲಾಟ್ ಮಾಡಿದ್ದಾರೆ, ಅಲ್ಲಿ ಕೆಲಸ ನಡೆಯುತ್ತಿದೆ, ಆದರೆ ಸಮಯಕ್ಕೆ ಸರಿಯಾಗಿ ಕಂಟ್ರಾಕ್ಟರ್ ಕೆಲಸ ಮಾಡಿರುತ್ತಾನೆ. ಬಿಲ್ ಸಬ್ಮಿಟ್ ಆಗಿರುತ್ತದೆ. ಆ ಬಿಲ್ ಕೊಡುವುದಿಲ್ಲ. ಏಕೆಂದರೆ ಎಲ್ಒಸಿ ಬಂದಿಲ್ಲ ಎಂದು ಹೇಳುತ್ತಾರೆ. ಆದರೆ ಸರ್ಕಾರ ಒಂದು ಕೆಲಸ ಮಾಡಬೇಕಾಗುತ್ತದೆ. ಏನೆಂದರೆ ವರ್ಷಕ್ಕೆ 65 ಕೋಟಿ ರೂಪಾಯಿ ಕೊಡಬೇಕು ಎಂದು ನಿರ್ಧಾರ ಮಾಡಿದ ಮೇಲೆ ಅದನ್ನು ಆ ಬೋರ್ಡಿನ ಹೆಸರಿನಲ್ಲಿ ನೀವು ಇಟ್ಟುಬಿಡಬೇಕು. ಅಲ್ಲಿ ಸೆಕ್ರೆಟರಿ ಅಥವಾ ಡಿವಿಜನಲ್ ಕಮಿಷನರ್‌ರವರು ಲೋಕಲ್ ಅಥಾರಿಟಿಯವರು ಪ್ರತಿ ತಿಂಗಳು ಸರ್ಕಾರಕ್ಕೆ ಪತ್ರ ಬರೆಯುತ್ತಲೇ ಇರಬೇಕು. ಇದರಲ್ಲಿ ಹಣ ಇಲ್ಲ, ಕಂಟ್ರಾಕ್ಟರ್ ಬಿಲ್ ನಿಂತಿದೆ, ನೀವು ಹಣ ಕಳುಹಿಸಿಕೊಡಿ ಎಂದು ಹೀಗಾದರೆ ಏನಾಗುತ್ತದೆಯೆಂದರೆ ಈಗ ರೋಡ್ ಕೆಲಸ ಇರುತ್ತದೆ, ಈಗ ಮಳೆಗಾಲದಲ್ಲಿ ಇದರ ಬಿಲ್ ಕೊಡುವುದಿಲ್ಲ, ಹಣ ಕೊಡುವುದಿಲ್ಲ ಕಂಟ್ರಾಕ್ಟರ್ ಕೆಲಸ ಮಾಡುವುದಿಲ್ಲ. ಹೊಸ ತಿಂಗಳು ಹಿರಿಯ ಸಚಿವರು ಫೆಬ್ರವರಿ ಕೊನೆಗೆ 15 ಕೋಟಿ ರೂಪಾಯಿ ರಿಲೀಸ್ ಮಾಡಿದ್ದಾರೆ ಎಂದು ಹೇಳುತ್ತಿದ್ದರು. ಈ 15 ಕೋಟಿ ರೂಪಾಯಿ ಬಂದಿದ್ದಕ್ಕಾಗಿ ಈಗ ರೋಡ್ ಕೆಲಸ ನಡೆಯುತ್ತಿದೆ. ಈಗ ನೀರು ಹಾಕಬೇಕಾದರೆ ನೀರು ಇಲ್ಲ. ರೋಡ್ ಕೆಲಸ ಈಗ ಸರಿಯಾಗಿ ಆಗುವುದಿಲ್ಲ. ಆಮೇಲೆ ಬೇಸಿಗೆ ಬಂದಾಗ ಬೇಸಿಗೆಗೆ ಟಾರ್ ಕೆಲಸ ಮಾಡಬೇಕು ಮತ್ತು ಟ್ಯಾಂಕ್ ನಿರ್ಮಾಣ ಕೆಲಸ ಮಾಡಬೇಕು. ಏಕೆಂದರೆ ಕೇವಲ 2-3 ಇಲಾಖೆಗಳಲ್ಲಿ ಕೆಲಸ ನಡೆಯುತ್ತಾ ಇಲ್ಲ. ಸರ್ಕಾರದ 21 ಇಲಾಖೆಗಳಲ್ಲೂ ಈ ಅಭಿವೃದ್ಧಿ ಆಶ್ರಯದಲ್ಲಿ ಈ ಕೆಲಸ ನಡೆಯುತ್ತಿದೆ. ಅದಕ್ಕಾಗಿ ಎಲ್ಲಾ ಕೆಲಸಗಳಿಗೂ ಹೈದರಾಬಾದ್ ಕರ್ನಾಟಕ ಬೋರ್ಡ್ ಇರುತ್ತದೆ. ಆ ಕಾರಣದಿಂದ ರೊಟೀನ್ ಆಗಿ ಬರತಕ್ಕಂತಹ ಬಜೆಟ್ ಕೂಡ ಅನೇಕ ಇಲಾಖೆಯಲ್ಲಿ ಬರುತ್ತಿಲ್ಲ. ಇದರ ಮೇಲೆ ಅವಲಂಬಿತವಾಗಿದ್ದಾಗ ಎಲ್ಲಾ ಕೆಲಸಗಳಿಗೆ ರೊಟೀನ್ ಆಗಿ ಫಂಡ್ಸ್ ಬರುತ್ತಿಲ್ಲ. ಡೆವಲಪ್‌ಮೆಂಟ್ ಆಶ್ರಯದಲ್ಲಿ ಕೂಡ ಫಂಡ್ಸ್ ಬರುತ್ತಿಲ್ಲ. ಹೀಗಾಗಿ ಎಲ್ಲಾ ಕೆಲಸಗಳು ಸ್ಥಗಿತವಾಗಿವೆ. ಅದಕ್ಕಾಗಿ ಸಮಯಕ್ಕೆ ಸರಿಯಾಗಿ ಹಣ ಬರುವಂತೆ ಮಾಡಬೇಕು. ಅದಕ್ಕೆ ಇನ್ನೊಂದು ಪ್ಲೆಸ್ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಏನೆಂದರೆ ಈಗ ಸುಮಾರು ಈ ಬಿಲ್ ಪಾಸ್ ಆಗಿ ಏರಡು ವರ್ಷವಾಯಿತು. ಇನ್ನು ನೀವು ಬೋರ್ಡ್ ಕಾನ್ಸ್‌ಟಿಟ್ಯೂಟ್ ಮಾಡಿಲ್ಲ. ಒಂದು ವೇಳೆ ನೀವು ಬೋರ್ಡ್ ಕಾನ್ಸ್‌ಟಿಟ್ಯೂಟ್ ತಕ್ಷಣ ಮಾಡಿದ್ದಾದರೆ ಆ ಬೋರ್ಡ್‌ನ ಆಶ್ರಯದಲ್ಲಿ ನೀವು ಹಣ ಇಡುವುದಕ್ಕೆ ಬರುತ್ತದೆ. ಆಮೇಲೆ ನಿರಂತರವಾಗಿ, ಸುಸೂತ್ರವಾಗಿ ಕೆಲಸಗಳು ಸುಗಮವಾಗಿ ನಡೆಯುತ್ತಿರುತ್ತವೆ. ಅದಕ್ಕಾಗಿ ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ ಮಂತ್ರಿಗಳು ನಿರ್ದಿಷ್ಟವಾಗಿ ಉತ್ತರ ಕೊಡಬೇಕು. ಈಗ ವರ್ಷಕ್ಕೆ ಏನು ಹಣ ಅವರು ನಿಗದಿ ಮಾಡಿರುತ್ತಾರೆ ಆ ಹಣವನ್ನು ಬೋರ್ಡ್‌ನ ಹೆಸರಿನಲ್ಲಿ ಇಡಬೇಕು. ಏರಡನೆಯದು ನೀವು ಬೋರ್ಡನ್ನು ಯಾವಾಗ ರಚನೆ ಮಾಡುತ್ತೀರಿ, ಏಕೆಂದರೆ ಸುಗಮವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:- ಮಾನ್ಯ ಅಧ್ಯಕ್ಷರೇ, ಈ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯ ಯೋಜನೆಯಲ್ಲಿ ಪ್ರತಿ ವರ್ಷ ನಿಗದಿ ಮಾಡಿರುವ ಹಣವನ್ನು ಸರಿಯಾದ ವೇಳೆಯಲ್ಲಿ ಬಿಡುಗಡೆ ಮಾಡಲಾಗಿದೆಯೇ ? ಬಿಡುಗಡೆ ಮಾಡಿದ್ದರೆ ಆ ಹಣ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ? ಈಗ ಸಭ್ಯಕ್ಕೆ 50 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಇನ್ನು 15 ಕೋಟಿ ರೂಪಾಯಿ ಬಿಡುಗಡೆ ಮಾಡುವುದು ಯಾವಾಗ ? ಒಂದು ವೇಳೆ ಪ್ರತಿ ವರ್ಷ ಈ ಹಣ ಬಿಡುಗಡೆ ಮಾಡಿದ್ದರೆ, ಈ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯ

ಯೋಜನೆಯ ಅಡಿಯಲ್ಲಿ ಕೈಗೊಂಡಿರುವ ಕೆಲಸಗಳು ಇಲ್ಲಿಯವರೆಗೆ ಸಂತು ಹೋಗಿದ್ದು ಏಕೆ ? ನನ್ನ ಕ್ಷೇತ್ರದಲ್ಲಿ ಗುಲ್ಬರ್ಗ ಕೋಡಂಗಲ್ ರೋಡ್, ಸೇಡಂ ಕೊಳ್ಳ ರೋಡ್ ಕರ್ನಾಟಕ ರಾಜ್ಯದಲ್ಲಿ ಹದಗೆಟ್ಟಿರುವ ರಸ್ತೆಗಳಾಗಿರುತ್ತವೆ. ಆದರೆ ಎರಡು ವರ್ಷಗಳಿಂದ ನನ್ನ ಕ್ಷೇತ್ರದಲ್ಲಿ ಕೆಲಸ ಪ್ರಗತಿಯಲ್ಲಿಯೇ ಇಲ್ಲ. ಕೆಲವು ರಸ್ತೆಗಳು ಮಂಜೂರು ಆಗಿ ಟೆಂಡರ್ ಸಹ ಆಗಿಲ್ಲ. ಇದರ ಬಗ್ಗೆ ಉತ್ತರ ಸೇಡಬೇಕು ಮತ್ತು 15 ಕೋಟಿ ರೂಪಾಯಿ ಬಿಡುಗಡೆ ಮಾಡಿ ತೀವ್ರ ಕೆಲಸ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಶ್ರೀರಂಗದೇವರಾಯಲು:– ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರು ಹೇಳಿದರು, ಹೈದರಾಬಾದ್ – ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಆಗಿದೆ. ಅದಕ್ಕೆ ಛೇರ್ಮನ್ ಸನ್ಮಾನ್ಯ ಘೋರ್ಪಡೆಯವರು ಇದ್ದಾರೆ. ಈಗ ನಾನು ಹೊಸದಾಗಿ ಮಂತ್ರಿ ಪದವಿ ಸ್ವೀಕಾರ ಮಾಡಿದ್ದೇನೆ. ನನಗೆ ತಿಳಿದ ಮಟ್ಟಿಗೆ ವೀರೇಂದ್ರ ಪಾಟೀಲರು ಪ್ರತಿ ವರ್ಷ 50 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದರು. ಪ್ರತಿ ಎಂ.ಎಲ್.ಎ.ಗೆ 50 ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳಿ ನಮಗೆ ಆದೇಶ ನೀಡಿದ್ದರು. ಅದರ ಪ್ರಕಾರ .....

Sri Basavaraja Rayareddy:– I am on a point of order.

Mr. Speaker:– Yes. What is your point of order?

ಶ್ರೀ ಬಸವರಾಜ ರಾಯರೆಡ್ಡಿ:– ಇವರು ಏನು ಹೇಳುತ್ತಾರೆಂದರೆ ಘೋರ್ಪಡೆಯವರು ಅದರ ಅಧ್ಯಕ್ಷರಾಗಿದ್ದಾರೆ. ಅವರು ಉತ್ತರ ಕೊಡುತ್ತಾರೆ ಎಂದು ಹೇಳಿದ್ದಾರೆ. ಸದನದಲ್ಲಿ ನೀವು ಅದರ ಮಂತ್ರಿಗಳು. ನೀವು ಅದಕ್ಕೆ ಉತ್ತರ ಕೊಡಬೇಕು. ಘೋರ್ಪಡೆಯವರಲ್ಲ.

ಶ್ರೀ ಶ್ರೀರಂಗದೇವರಾಯಲು:– ಘೋರ್ಪಡೆಯವರು ಉತ್ತರ ಕೊಡುತ್ತಾರೆ ಎಂದು ನಾನು ಹೇಳಿಲ್ಲ. ಮಾನ್ಯ ಘೋರ್ಪಡೆಯವರು ಇದಕ್ಕೆ ಪ್ರೆಸಿಡೆಂಟ್ ಆಗಿದ್ದಾರೆ. ಎಂ.ಎಲ್.ಎ.ಗಳು ಇದಕ್ಕೆ ಮೆಂಬರ್ಸ್ ಆಗಿದ್ದಾರೆ. ಇದು ಬೋರ್ಡ್ ಫಾರಂ ಆಗಿದೆ. ಅಂದರೆ ನಾನು ಹೇಳುತ್ತಿರುವುದು ಪ್ರತಿ ಎಂಎಲ್‌ಎಗೆ ಐವತ್ತು ಲಕ್ಷ ರೂಪಾಯಿ ಹಾಗೆ ನಮಗೆ 39 ಎಂ.ಎಲ್.ಎ. ಇದ್ದೇವೆ. 19.5 ಕೋಟಿ ಎಂ.ಎಲ್.ಎ.ಗೆ ಉಳಿದ 30.5 ಕೋಟಿ ಡಿಪಾರ್ಟ್‌ಮೆಂಟಿಗೆ ಇದು ಖರ್ಚು ಮಾಡಬೇಕಾಗಿತ್ತು. ನನಗೆ ಅಮೌಂಟ್ ಸ್ವಲ್ಪ ಟ್ಯಾಲಿ ಮಾಡಬೇಕಾಗಿದೆ. ಇದರ ಬಗ್ಗೆ ನಾನು ಅಕೌಂಟ್ಸ್ ಕೂಡ ನೋಡುತ್ತಿದ್ದೇನೆ. ಇದು ನನಗೂ ಕೂಡ ಸ್ವಲ್ಪ ಮಾಹಿತಿ ಬೇಕಾಗಿದೆ. ಇದು ನಾವು ಅಂದುಕೊಂಡಿದ್ದಕ್ಕಿಂತ ಜಾಸ್ತಿ ಖರ್ಚಾಗಿದೆ. ಈಗ ನಮ್ಮ ಲೆಕ್ಕದ ಪ್ರಕಾರ 150 ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿತ್ತು. ಆದರೆ ಈಗ ಸಾಧಾರಣ ಇನ್ನೂ ನಾವು 120 ಕೋಟಿ ರೂಪಾಯಿ ಕೊಡಬೇಕಾದಂಥ ಪರಿಸ್ಥಿತಿ ಬಂದಿದೆ. ಅದು ಹೇಗೆ ಏಂಬ ಬಗ್ಗೆ ಅಕೌಂಟ್ಸ್ ನೋಡಬೇಕಾಗಿದೆ. ಇದರ ಬಗ್ಗೆ ನಾವು ತೀವ್ರ ಪರಿಶೀಲನೆ ಮಾಡಿ ಇದರ ಬಗ್ಗೆ ಎಲ್ಲಿ ನಮಗೆ ಅಮೌಂಟ್ ತಪ್ಪು ದಾರಿಯಲ್ಲಿ ಹೋಗಿದೆ ಇಲ್ಲ ಸರ್ಕಾರ ಬೇರೆಯದಕ್ಕೆ ಉಪಯೋಗಿಸಿದ್ದಾರೆಯೆ ಎಂದು ನೋಡಿ ವಿಚಾರ ಮಾಡಿ ನಾನು ಹೇಳುವುದಕ್ಕೆ ಬಯಸುತ್ತೇನೆ.

(ಗೊಂದಲ)

ಡಾ।। ಎ.ಬಿ. ಮಲಕ ರೆಡ್ಡಿ:– ಸರ್ಕಾರ ಸ್ಟೇಟ್‌ಮೆಂಟ್ ಮಾಡಬೇಡವೇ ? ಬರೀ ಬಾಯಲ್ಲಿ ಉತ್ತರ ಕೊಟ್ಟರೆ ಹೇಗೆ ? ಅಥೆಂಟಿಕ್ ಸ್ಟೇಟ್‌ಮೆಂಟ್ ಬೇಡವೇ ಗಮನ ಸೆಳೆಯುವ ಸೂಚನೆಗೆ.

(ಗೊಂದಲ)

ಶ್ರೀ ಪಿ. ಜಿ.ಆರ್. ಸಿಂಧ್ಯ:– ನಾವು ಸರ್ಕಾರದ ಗಮನ ಸೆಳೆಯುತ್ತೇವೆ ಎಂದು ಹೇಳಿ ನಮ್ಮ

ಸದಸ್ಯರ ಹಕ್ಕುಚ್ಯುತಿ ಪ್ರಶ್ನೆ ಸ್ವಾಮಿ ಇದು. ಸರ್ಕಾರದವರು ಒಂದು ಹೇಳಿಕೆಯನ್ನು ಕೊಡಲಿಲ್ಲ ಎಂದು ಹೇಳಿದರೆ ಯಾವ ಆಧಾರದ ಮೇಲೆ ನಾವು ಇಲ್ಲಿ ಚರ್ಚೆ ಮಾಡಬೇಕು ? ಚರ್ಚೆಯಲ್ಲಿ ನಾವು ಹೇಗೆ ಭಾಗವಹಿಸಬೇಕು ? ಗಮನ ಸೆಳೆಯತಕ್ಕಂಥದ್ದು .....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಮಂತ್ರಿಗಳ ಬಗ್ಗೆ ಗೌರವ ಇದೆ. ಹೇಳಿಕೆ ಕೊಡಿ. ಈ ಸದನದಲ್ಲಿ ಅಧಿಕೃತವಾಗಿ ಒಂದು ಹೇಳಿಕೆಯನ್ನು ಕೊಡಬೇಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ನಿಮ್ಮಲ್ಲಿ ನಾನು ಬಹಳ ಕೈಮುಗಿದು ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ಸದನ ನಡೆಯತಕ್ಕಂಥದ್ದು ಮುಂದೆ ಬರತಕ್ಕಂಥದ್ದು ಬಹಳ ವರ್ಷಗಳ ಕಾಲ ನಡೆಯಬೇಕು. ಸತ್ ಸಂಪ್ರದಾಯಗಳನ್ನು ಹಾಕಬೇಕು. ನಾವು ಇಲ್ಲಿ ಜನತೆಯ ಸಮಸ್ಯೆಯನ್ನು ತಂದು ಒಡ್ಡುವುದಕ್ಕೆ ಬಂದಿದ್ದೇವೆಯೇ ಹೊರತು ಪ್ರಚಾರ ದೃಷ್ಟಿಯಿಂದಾಗಿ ಅಥವಾ ಮತ್ತೇನೋ ಇಲ್ಲಿ ಮಾಡಬೇಕು ಎನ್ನುವ ಉದ್ದೇಶದಿಂದ ಬಂದಿಲ್ಲ. ನಮ್ಮ ಮನಸ್ಸಿಗೆ ಬಹಳ ನೋವು ಇದೆ ಎಂದು ಮೂರು ದಿವಸದಿಂದ ತಮ್ಮ ಗಮನಕ್ಕೆ ಪದೇ ಪದೇ ಒತ್ತಿ ಒತ್ತಿ ಹೇಳುತ್ತಿದ್ದೇವೆ. ನಮಗೆ ಮೂರು ಕಾಸಿನ ಬೆಲೆಯೂ ಸಹಿತ ಈ ಸರ್ಕಾರದವರು ಕೊಡುತ್ತಿಲ್ಲ. ತಮಗೆ ಒಂದು ಹೇಳಿಕೆಯನ್ನು ಕೊಡುವುದಕ್ಕೆ ಏನು ತೊಂದರೆ ಸ್ವಾಮಿ ? ನಾನು ಇದನ್ನು ಹೇಳುವುದಕ್ಕೂ ನಮಗೆ ಅವಕಾಶ ಇಲ್ಲ ಏಂದರೆ ಹೇಗೆ ?

ಅಧ್ಯಕ್ಷರು:– ಹಾಗೆ ಹೇಳಲಿಲ್ಲ. ಹೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಅವರು ಹೇಳಿದ ಹಾಗೆ ಮುಂದೆ ಹಾಕಿದರೆ ಬೇಕಾದರೆ ನಾಳೆ ನಾಡಿದ್ದೋ ಸ್ಟೇಟ್‌ಮೆಂಟ್ ಮಾಡಿಸಬಹುದು.

ಅಧ್ಯಕ್ಷರು:– ಆಯಿತು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮುಂದೆ ಹಾಕಿಸಿ. ಯಾರು ಬೇಡ ಎಂದು ಹೇಳುತ್ತಾರೆ ? ನಮಗೆ ಉತ್ತರ ಕೊಡುತ್ತೀರಿ ಇಲ್ಲಿ, ಉತ್ತರವನ್ನು ಇವತ್ತು ಓದುವುದಿಲ್ಲ ನಾಳೆ ಮುಂದೆ ಹಾಕಿ ಏನ್ನುತ್ತೀರಿ. ನನಗೆ ಇದಕ್ಕೆ ಉತ್ತರ ಇಲ್ಲ. ತಮಗೆ ಏನಾದರೂ ಹೇಳುವುದಕ್ಕೆ ಬಂದರೆ ಸಿಟ್ಟು ಮಾಡಿಕೊಳ್ಳುತ್ತೀರಿ. ತಾವು ಉತ್ತರ ಕೊಡಿ ಎಂದು ಹೇಳಿ ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ತಾವು ಉತ್ತರ ಕೊಡುವ ಹಾಗೆ ಇಲ್ಲ. ಮಂತ್ರಿಗಳು ಎಲ್ಲೆಲ್ಲೋ ಕುಳಿತುಕೊಳ್ಳುತ್ತಾರೆ. ಯಾವಾಗ ಅಂದರೆ ಆಗ ಬರುತ್ತಾರೆ. ಇದನ್ನೆಲ್ಲಾ ನಾವು ಸಹಿಸಿಕೊಂಡು ಹೋಗಬೇಕು. ನೀವು ಉತ್ತರ ಕೊಡದಿದ್ದರೂ ಸಹಿತ ನಾವು ಹೋಗಬೇಕು. ಇಷ್ಟೆಲ್ಲಾ ಆದಮೇಲೂ ಸಹಿತ ಈ ಸದನ ಸರಿಯಾಗಿದೆ ಎಂದು ನಾವು ಹೇಳಿ ಭಾವಿಸಿಕೊಳ್ಳಬೇಕು.

(ಗೊಂದಲ)

ಡಾ|| ಎ. ಬಿ. ಮಲಕ ರೆಡ್ಡಿ:– ಲಿಖಿತವಾದ ಹೇಳಿಕೆ ಕೊಡಬೇಕು ಎಂದು ಇಲ್ಲದಿದ್ದರೂ ಕೂಡ ಅರ್ಥವತ್ತಾದ ಚಿತ್ರ ತಿಳಿಯಬೇಕಾದರೆ ಕೋಟ್ಯಾಂತರ ರೂಪಾಯಿ ಎಲ್ಲಿ ಇನ್‌ವಾಲ್ವ್ ಆಗಿರುತ್ತದೆ, ಅಂಥ ಹೊತ್ತಿನಲ್ಲಿ ಅಧಿಕೃತವಾಗಿ ರಿಟನ್ ಸ್ಟೇಟ್‌ಮೆಂಟ್ ಬೇಕೋ ಬೇಡವೋ ?

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್:– ಇದುವರೆಗೂ ಏತಕ್ಕೆ ಹೇಳಿಕೆಯನ್ನು ಕೊಡುತ್ತಿದ್ದೀರಿ ನೀವು ಸರ್ಕಾರದವರು ? ಈವತ್ತು ತಾವು ಈ ನಿಯಮದ ಪುಸ್ತಕವನ್ನು ಬಿಚ್ಚುತ್ತಿದ್ದೀರಿ ಏನು ಹೇಳಬೇಕೋ ಹೇಳಿ. ಈ ತರಹವಾದರೆ ನಮಗೆ ನಿಜವಾಗಿಯೂ ಗೌರವ ಬರುವುದಿಲ್ಲ. ನಾವು ಸದನದಲ್ಲಿ ಇರಬೇಕೋ ಬೇಡವೋ ಹೇಳಿ. ಬೇಡ ಎಂದು ಹೇಳಿದರೆ ಹೊರಗಡೆ ಹೋಗುತ್ತೇವೆ.

ಶ್ರೀ ಹೆಚ್. ಜಿ. ಆರ್. ಸಿದ್ಧಯ್ಯ:– ಮಾನ್ಯ ಕೃಷ್ಣ ಅವರೇ, ನಮಗೆ ಏನಾಗಿದೆ ಎಂದರೆ ನಾವು ಏನಾದರೂ ಹೇಳುವುದಕ್ಕೆ ಹೊರಟರೆ ಇವರು ಏನೋ ಬೇರೆ ಅರ್ಥಗಳನ್ನು ಇಟ್ಟುಕೊಂಡು ಮಾತನಾಡುತ್ತಾರೆ ಎನ್ನುವ ಅಭಿಪ್ರಾಯಕ್ಕೆ ತಾವು ಬರುತ್ತೀರಿ. ಈಗ ನಿಮ್ಮ ಸರ್ಕಾರ ಫಂಕ್ಷನ್ ಆಗುವುದಿಲ್ಲ ಎನ್ನುವುದಕ್ಕೆ ಇದಕ್ಕಿಂತ ಉದಾಹರಣೆ ಏನು ಹೇಳಬೇಕು ? ನಾವು ಕೂಡ ಐದಾರು ವರ್ಷಗಳ ಕಾಲ ಮಂತ್ರಿಗಿರಿ ಮಾಡಿದ್ದೇವೆ. ನಾವು ಸಣ್ಣ ಜಾತಿಯವರು ಇರಬಹುದು, ಬಹಳ ಸಣ್ಣವರು ಇರಬಹುದು. ಆದರೆ ನಾನು ಬಹಳ ನೋವಿನಿಂದ ಈ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾವು ಹೇಳತಕ್ಕ ವಿಚಾರಗಳು ತಮ್ಮ ಗಮನಕ್ಕೆ ಬರುವುದಿಲ್ಲ. ಸರ್ಕಾರದ ಗಮನಕ್ಕೆ ಬರುವುದಿಲ್ಲ. ನಾವು ಕೇಳತಕ್ಕ ಪ್ರಶ್ನೆಗಳಿಗೆ ಉತ್ತರ ಇಲ್ಲ, ಇಲ್ಲ. ಹೆಲ್ಪ್ ಓವರ್ ಎಂದು ಹೇಳುತ್ತೀರಿ. ಇನ್ನೊಂದು ದಿವಸ ಉತ್ತರ ಕೊಡುತ್ತೇನೆಂದು ಹೇಳುತ್ತೀರಿ. ಕಾಲಿಂಗ್ ಅಟೆನ್‌ಷನ್‌ಗೆ ಉತ್ತರ ಇಲ್ಲ. ನಾವು ಏತಕ್ಕೆ ಇಲ್ಲಿ ಕುಳಿತುಕೊಳ್ಳಬೇಕು ?

ಶ್ರೀ ಶ್ರೀರಂಗದೇವರಾಯಲು:– ಮಾನ್ಯ ಅಧ್ಯಕ್ಷರೇ, ನಾನು ನಾಳೆ ಉತ್ತರ ಕೊಡುತ್ತೇನೆ.

2. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಂಗಾಮಿ ಲಗಾಣಿ ಮೇಲೆ ಗುತ್ತಿಗೆಗೆ ಕೊಟ್ಟಿರುವ ಜಮೀನುಗಳನ್ನು ಖಾಯಂಗೊಳಿಸುವ ಬಗ್ಗೆ.

† ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಅರಣ್ಯ ಇಲಾಖೆಯ ಭೂಮಿಯನ್ನು 1970ಕ್ಕೂ ಮೊದಲು ಕಡು ಬಡವರಿಗೆ ಹಾಗೂ ಪರಿಶಿಷ್ಟ ಜಾತಿಯ ಜನಾಂಗದವರಿಗೆ ಕೃಷಿಗಾಗಿ ನೀಡಲು ಕಂದಾಯ ಇಲಾಖೆಗೆ ಬಿಡುಗಡೆ ಮಾಡಿದ್ದರೂ ಸಹ ಸಾಗುವಳಿ ಮಾಡುತ್ತಿರುವ ರೈತರಿಗೆ ಮಂಜೂರು ಮಾಡಬೇಕಾಗಿರುವುದರಿಂದ ಸರ್ಕಾರ, ಸಹಕಾರ ಸಂಘ ಮತ್ತು ಬ್ಯಾಂಕುಗಳಿಂದ ಯಾವುದೇ ಸವಲತ್ತು ದೊರೆಯದೆ ತೊಂದರೆಯಾಗುತ್ತಿರುವುದರ ಬಗ್ಗೆ ನಾನು ಮಾನ್ಯ ಕಂದಾಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):– 1964ರಿಂದ 1968ನೇ ಇಸವಿಯಲ್ಲಿ ಸಾಗುವಳಿಗೆಂದು ಕಂದಾಯ ಇಲಾಖೆಗೆ ಬಿಡುಗಡೆ ಮಾಡಿದ ಅರಣ್ಯ ಭೂಮಿಯ ಕ್ಷೇತ್ರ 65,689 ಏಕರೆಗಳ ಪೈಕಿ, 19,529 ಏಕರೆ ಪ್ರದೇಶವನ್ನು 6,156 ಜನರಿಗೆ ಸಾಗುವಳಿಗಾಗಿ 1970ನೇ ಇಸವಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಸದರಿ ಭೂಮಿಯನ್ನು ಮೂರು ವರ್ಷಗಳ ಒಳಗೆ ಸಾಗುವಳಿಗೆ ತರಬೇಕೆಂಬ ಷರತ್ತಿಗೆ ಒಳಪಡಿಸಿ ಮಂಜೂರು ಮಾಡಲಾಗಿತ್ತು. 1974ನೇ ಇಸವಿಯ ನಂತರ ಈ ಗುತ್ತಿಗೆಯನ್ನು ಮುಂದುವರೆಸಿರುವುದಿಲ್ಲ. ಗುತ್ತಿಗೆದಾರರ ಸ್ವಾಧೀನದಲ್ಲಿ ಸದರಿ ಜಮೀನುಗಳು ಇರುತ್ತವೆ. ಕೆಲವರು ಜಮೀನು ಅಭಿವೃದ್ಧಿ ಮಾಡಿದ್ದರೆ ಮತ್ತೆ ಕೆಲವರು ಕೆಲವು ಮಂಜೂರಿ ಷರತ್ತುಗಳನ್ನು ಉಲ್ಲಂಘಿಸಿದ್ದಾರೆ. ಆದಾಗ್ಯೂ, ಸದರಿ ಅರಣ್ಯ ಭೂಮಿಯು ಉದರ ಏಲ್ಲಾ ಗುಣಗಳನ್ನು ಕಳೆದುಕೊಂಡಿದೆ. ನಿಯಮಗಳನುಸಾರ ಆ ಭೂಮಿಗಳನ್ನು ಏಂಬೇ ಕೆಲಸಕ್ಕೆ ಅರ್ಹ ಗುತ್ತಿಗೆದಾರರಿಗೆ ಮಂಜೂರು ಮಾಡಲು ಕಂದಾಯ ಇಲಾಖೆಯು ಇಚ್ಛಿಸುತ್ತದೆ. ಈ ಜಮೀನುಗಳನ್ನು ಅರಣ್ಯ ಸಂರಕ್ಷಣಾ ಕಾಯಿದೆಯಲ್ಲಿ ಬಿಡುಗಡೆ ಮಾಡಬೇಕೆ ಅಥವಾ ಬೇಡವೆಂಬ ಬಗ್ಗೆ ಭಿನ್ನಾಭಿಪ್ರಾಯವಿದ್ದುದರಿಂದ ಇದನ್ನು ಮಾಡಲಾಗಿಲ್ಲ.